# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 139
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 05.07.2023
ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನಾ ಮತ್ತು ರೇಷ್ಮೆ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ರೇಷ್ಮೆ ಇಲಾಖೆಯಲ್ಲಿ ಇರುವ ಒಟ್ಟು ನೌಕರರ ಸಂಖ್ಯೆ ಎಷ್ಟು. (ವರ್ಗವಾರು ವಿವರ ನೀಡುವುದು)</td><td>ರೇಷ್ಮೆ ಇಲಾಖೆಯಲ್ಲಿ ಪ್ರಸ್ತುತ ಒಟ್ಟು 2695 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 1339 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 1356 ಹುದ್ದೆಗಳು ಖಾಲಿ ಇರುತ್ತವೆ. ವಿವರ ಈ ಕೆಳಗಿನಂತಿದೆ.<br>
<table>
<tr><th>ವರ್ಗ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ಎ</td><td>59</td><td>53</td><td>6</td></tr>
<tr><td>ಬಿ</td><td>373</td><td>208</td><td>165</td></tr>
<tr><td>ಸಿ</td><td>1888</td><td>832</td><td>1056</td></tr>
<tr><td>ಡಿ</td><td>375</td><td>246</td><td>129</td></tr>
<tr><td>ಒಟ್ಟು</td><td>2695</td><td>1339</td><td>1356</td></tr>
</table></td></tr>
<tr><td>ಆ</td><td>ರೇಷ್ಮೆ ಬೆಳೆ ಹಾಗೂ ರೇಷ್ಮೆ ಉತ್ಪಾದನೆಯನ್ನು ಹೆಚ್ಚು ಮಾಡಲು ಸರ್ಕಾರ ರೂಪಿಸಿರುವ ಯೋಜನೆಗೆ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಇ</td><td>ಹಾಗಿದ್ದಲ್ಲಿ ಕೊರತೆ ಇರುವ ತಾಂತ್ರಿಕ ಸಿಬ್ಬಂದಿಯ ಸಂಖ್ಯೆ ಎಷ್ಟು; ತಾಂತ್ರಿಕ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು?</td><td>ರೇಷ್ಮೆ ಇಲಾಖೆಯಲ್ಲಿ ಪ್ರಸ್ತುತ ಒಟ್ಟು 1089 ತಾಂತ್ರಿಕ ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ 786 ಹುದ್ದೆಗಳು ಭರ್ತಿಯಾಗಿರುತ್ತವೆ ಹಾಗೂ 1023 ತಾಂತ್ರಿಕ ಹುದ್ದೆಗಳು ಖಾಲಿ ಇರುತ್ತವೆ.<br>
ವರ್ಗಾವಾರು ತಾಂತ್ರಿಕ ಹುದ್ದೆಗಳ ವಿವರ<br>
<table>
<tr><th>ವರ್ಗ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ಎ</td><td>51</td><td>50</td><td>1</td></tr>
<tr><td>ಬಿ</td><td>338</td><td>192</td><td>146</td></tr>
<tr><td>ಸಿ</td><td>1420</td><td>544</td><td>876</td></tr>
<tr><td>ಒಟ್ಟು</td><td>1809</td><td>786</td><td>1023</td></tr>
</table>
<ul><li>ಈ ಹಿಂದೆ ರೇಷ್ಮೆ ಇಲಾಖೆಗೆ ಮಂಜೂರಾಗಿದ್ದ ಒಟ್ಟು 3003 (ಗ್ರೂಪ್ ಎ-69, ಬಿ-444, ಸಿ-2490) ತಾಂತ್ರಿಕ ಹುದ್ದೆಗಳಲ್ಲಿ ಗ್ರೂಪ್-ಸಿ ವೃಂದದಲ್ಲಿ ಖಾಲಿ ಇದ್ದ 733 ತಾಂತ್ರಿಕ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂಬಂಧ ಅನುಮೋದನೆ ಪಡೆಯಲು ಕ್ರಮ ವಹಿಸಲಾಗಿತ್ತು.</li></ul></td></tr>
</table>

| | | |
|---|---|---|
| | | ಆದರೆ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ 79 ರೇಸೇವಿ 2022 ದಿನಾಂಕ: 21/03/2023 ರಲ್ಲಿ ರೇಷ್ಮೆ ಇಲಾಖೆಯ ಒಟ್ಟು ಹುದ್ದೆಗಳು 2695 ವೃಂದಬಲದೊಂದಿಗೆ ಕರ್ನಾಟಕ ರೇಷ್ಮೆ ಸೇವೆಗಳು (ನೇಮಕಾತಿ) ನಿಯಮಗಳು 2023 ರಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.<br><br>ಮುಂದುವರೆದು ಸದರಿ ದಿನಾಂಕ:21-03-2023 ರ ನಿಯಮಗಳನ್ವಯ ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ 97 ರೇಕೃವಿ 2022 ದಿನಾಂಕ:22/05/2023 ರಲ್ಲಿ ರೇಷ್ಮೆ ಇಲಾಖೆಯ ಪುನರ್ ಸಂಘಟನೆ ಸಂಬಂಧ ಹುದ್ದೆಗಳ ಬೇಡಿಕೆ ಮತ್ತು ಅವಶ್ಯಕತೆಯನುಸಾರ ಜಿಲ್ಲಾವಾರು /ತಾಲ್ಲೂಕು ವಾರು ವಿವಿಧ ವೃಂದದ ಅಧಿಕಾರಿ/ನೌಕರರ ಹುದ್ದೆಗಳನ್ನು ಪರಿಷ್ಕರಿಸಿ ವಿವಿಧ ಸಂಸ್ಥೆ/ ಕಚೇರಿಗಳಿಗೆ ನಿಗದಿಪಡಿಸಿ ಆದೇಶ ಹೊರಡಿಸಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ರೇಷ್ಮೆ ಇಲಾಖಾ ಪುನರ್ ಸಂಘಟನ ಪ್ರಕ್ರಿಯೆಯು ಅಂತಿಮಗೊಂಡ ನಂತರ ಪರಿಷ್ಕೃತ ತಾಂತ್ರಿಕ ವೃಂದ ಬಲ **1809** ರಲ್ಲಿ ನೇರ ನೇಮಕಾತಿ ಕೋಟಾದಡಿ ಲಭ್ಯವಾಗುವ ಖಾಲಿ ಹುದ್ದೆಗಳನ್ನು ಆಧರಿಸಿ ಭರ್ತಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br><br>ಖಾಲಿ ಹುದ್ದೆಗಳ ಭರ್ತಿಗೆ ಕಾಲಮಿತಿ ಹೊಂದಿರುವುದಿಲ್ಲ. |

**ಸಂಖ್ಯೆ:ರೇಷ್ಮೆ 75 ರೇಕೃವಿ 2023**

**( ಕೆ.ವೆಂಕಟೇಶ್)**
ಪಶುಸಂಗೋಪನಾ ಮತ್ತು ರೇಷ್ಮೆ ಸಚಿವರು